## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 21-12-2022

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 221/2022 ಕಲಂ 379 ಐಪಿಸಿ :-

ದಿನಾಂಕ 20/12/2022 ರಂದು 1315 ಗಂಟೆಗೆ ಫಿರ್ಯಾದಿ ಶ್ರೀಮತಿ ಕೆ.ಮಿನಾಕ್ಷಿ ಗಂಡ ಕೆ.ಮಧುಸೂದನರೆಡ್ಡಿ ವಯ:36 ವರ್ಷ ಜಾತಿ:ರೆಡ್ಡಿ ಉ:ಮನೆಗೆಲಸ ಸಾ/ಮನೆ. ನಂ.8-1-293/85/ಎ ಗಚ್ಚಿಬೌಲಿ ಮೆಹಂದಿಪಟ್ನನA ಹೈದ್ರಾಬಾದ ತೆಲಂಗಾನಾ ರಾಜ್ಯ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ ದಿನಾಂಕ 17/12/2022 ರಂದು ಬೀದರ ನಗರದ ಪ್ರತಾಪನಗರದಲ್ಲಿ ಇರುವ ಬೆಲ್ದಾಳೆ ಫಂಕ್ಷನ ಹಾಲನಲ್ಲಿ ಅಣ್ಣರಾದ ಶ್ರೀ.ಸಂಜೀವರೆಡ್ಡಿ ರವರ ಮಗಳ ಮದುವೆ ಕಾರ್ಯಕ್ರಮವಿದ್ದ ಕಾರಣ ಬೀದರಕ್ಕೆ ಬಂದು ಫಂಕ್ಷನ ಹಾಲಿನ ಡ್ರೆಸಿಂಗ ರೂಮಿನಲ್ಲಿ ಹೋಗಿ ಸೀರೆ ಮ್ಯಾಚಿಂಗಗಾಗಿ ತಂದಿದ್ದ ಬಂಗಾರದ ಆಭರಣಗಳನ್ನು ಲಗೇಜ ಬ್ಯಾಗನಲ್ಲಿ ಇಟ್ಟು ಲಗೇಜ ಬ್ಯಾಗಿಗೆ ಚಿಕ್ಕ ಬೀಗ ಹಾಕಿ 2:00 ಪಿ.ಎಮ್. ಗಂಟೆಯ ಸುಮಾರಿಗೆ ಡ್ರೆಸಿಂಗ ರೂಮಿನಿಂದ ಹೊರಗೆ ಕಾರ್ಯಕ್ರಮದಲ್ಲಿ ಭಾಗಿಯಾಗಲು ಹೋಗಿದ್ದು, ಮರಳಿ ಸಾಯಂಕಾಲ 5:00 ಪಿ.ಎಮ್. ಗಂಟೆಯ ಸಮಯಕ್ಕೆ ಮರಳಿ ಡ್ರೆಸಿಂಗ ರೂಮಿನಲ್ಲಿ ಡ್ರೇಸ ಚೆಂಜ ಮಾಡಲು ಹೋಗಿ ನೋಡಿದಾಗ ಲಗೇಜ ಬ್ಯಾಗಿಗೆ ಹಾಕಿದ ಚಿಕ್ಕ ಬೀಗ ಮುರಿದಿದ್ದು, ಬ್ಯಾಗಿನ ಚೈನ ತೆರೆದಿದ್ದು, ಬ್ಯಾಗಿನಲ್ಲಿ ಇದ್ದ ನನ್ನ 1) 30 ಗ್ರಾಂ.ತೂಕದ ಬಂಗಾರದ ಗಂಠನ ಸರ ಅ.ಕಿ.1,20,000/-ರೂ. 2)30 ಗ್ರಾಂ. ತೂಕದ ಬಂಗಾರದ ನನ್ನ ಮಗಳ ಕಪಟ್ಟಿ ಅ.ಕಿ.1,20,000/-ರೂ. ಬ್ಯಾಗಿನಲ್ಲಿ ಇರಲಿಲ್ಲ. ಹೀಗೆ ಒಟ್ಟು 60 ಗ್ರಾಂ. ತೂಕದ ಬಂಗಾರದ ಆಭರಣಗಳನ್ನು ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಬೀದರ ಸಂಚಾರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 132/2022 ಕಲಂ 279, 337, 304(ಎ)ಐಪಿಸಿ ಜೊತೆ 177 ಐಎಮ್.ವಿ. ಕಾಯ್ದೆ : -

ದಿನಾಂಕ 20/12/2022 ರಂದು ಫಿರ್ಯಾದಿ ಶ್ರೀಮತಿ ಸಂದ್ಯಾರಾಣಿ ಗಂಡ ಚೆಂದ್ರಕಾಂತ ಪಾಟೀಲ, ವಯ: 49 ವರ್ಷ ಜಾತಿ: ಲಿಂಗಾಯತ, ಉ: ಜಾಯ ಕಿಡ್ಸ ಶಾಲೆ ಪ್ರಿನ್ಸಿಪಾಲರು, ಸಾ: ಖಾಜಿ ಕಾಲೋನಿ ಬೀದರ ರವರು ನೀಡಿದ ಫಿರ್ಯಾದಿನ ಸಾರಾಂಶವೆನೆಂದರೆ ಇವರ ಪತಿಯವರಾದ ಶ್ರೀ. ಚೆಂದ್ರಕಾಂತ ತಂದೆ ಬಸವಂತಪ್ಪಾ ಪಾಟೀಲ, ವಯ: 50 ವರ್ಷ ಜಾತಿ: ಲಿಂಗಾಯತ, ಉ: ಜಾಯ ಕಿಡ್ಸ ಶಾಲೆಯ ನಿರ್ದೇಶಕರು, ಸಾ: ಖಾಜಿ ಕಾಲೋನಿ ಬೀದರ ಕಮಠಾಣಾ ಕಡೆಯಿಂದ ಬೀದರ ಕಡೆಗೆ ಮೊಟಾರ ಸೈಕಲ ನಂ. ಕೆಎ38ಯು 4271 ನೇದ್ದನ್ನು ಚಲಾಯಿಸಿಕೊಂಡು ವಿಜಯ ಕುಮಾರ ಪಾಟೀಲ ಫಾರಂ ಹೌಸ ಹತ್ತಿರ ಬಂದಾಗ, ಸಾಯಂಕಾಲ ಅಂದಾಜು 6:00 ಗಂಟೆ ಸುಮಾರಿಗೆ ಎದುರಿನಿಂದ ಒಂದು ಮೊಟಾರ ಸೈಕಲ ನಂ. ಕೆಎ34ಕ್ಯೂವ್0735 ನೇದ್ದರ ಸವಾರ ತನ್ನ ಮೊಟಾರ ಸೈಕಲ ಹಿಂದೆ ಇಬ್ಬರನ್ನು ಕೂಡಿಸಿಕೊಂಡು ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು, ಆತನ ಮುಂದಿನ ವಾಹನಕ್ಕೆ ಓವರ ಟೇಕ ಮಾಡಿ, ಎದುರಿನಿಂದ ಚಂದ್ರಕಾಂತರ ರವರು ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿ ಮಾಡಿರುತ್ತಾನೆ. ಇದರ ಪರಿಣಾಮ ಎರಡು ಮೊಟಾರ ಸೈಕಲ ಸವಾರರು ಮೊಟಾರ ಸೈಕಲ ಸಮೇತ ಬಿದ್ದಿರುತ್ತಾರೆ. ಫಿರ್ಯಾದಿಯ ಪತಿಯಾದ ಚಂದ್ರಕಾಂತ ರವರಿಗೆ , ಚಿಕಿತ್ಸೆ ಕುರಿತು ಆಸ್ಪತ್ರೆಗೆ ತರುವಾಗ ದಾರಿಯಲ್ಲಿ ಮೃತಪಟ್ಟಿರುತ್ತಾರೆ. ಎದುರಿನ ಮೊಟಾರ ಸೈಕಲ ಸವಾರಿನಿಗೆ ವಿಚಾರಿಸಲು ಅವನು ತನ್ನ ಹೆಸರು ಪ್ರಶಾಂತ ತಂದೆ ರವಿ ಮುಸ್ಕೆ, ವಯ 25 ವರ್ಷ, ಜಾತಿ ಕ್ರಿಶ್ಚನ, ಉ: ಕೂಲಿ ಕೆಲಸ ಸಾ: ಅಣದೂರ ತಾ: ಬೀದರ ಅಂತ ತಿಳಿಸಿದ್ದು, ಅವನಿಗೆ ಬಲ ಬುಜದ ಹತ್ತಿರ ಗುಪ್ತಗಾಯ, ಬಲಕೈ ಬೆರಳುಗಳಿಗೆ, ಬಲಕಾಲ ಮೊಳಕಾಲ ಮೇಲೆ, ಬೆರಳುಗಳಿಗೆ ರಕ್ತಗಾಯವಾಗಿರುತ್ತದೆ. ಹಿಂದೆ ಕುಳಿತಿದ್ದ ವ್ಯಕ್ತಿಗೆ ನೊಡಲು ಅವನ ಹೆಸರು ವಿಲ್ಸನ ತಂದೆ ಗಣಪತಿ, ವಯ 26 ವರ್ಷ, ಜಾತಿ ಕ್ರಿಶ್ಚನ ಸಾ: ಅಣದೂರ ಈತನಿಗೆ ತಲೆಗೆ , ಬಲಕೈಗೆ ಮೊಳಕೈಗೆ ಗುಪ್ತಗಾಯವಾಗಿರುತ್ತದೆ. ಅವನ ಹಿಂದೆ ಕುಳಿತವಳಿಗೆ ನೋಡಲು ವಚಲಾ ಗಂಡ ವಸಂತ ಗಾದಗೆನೋರ, ವಯ 55 ವರ್ಷ, ಜಾತಿ ಕ್ರಿಶ್ಚನ, ಉ: ಕೂಲಿ ಕೆಲಸ ಸಾ: ಅಣದೂರ ಇವಳಿಗೆ ಹಣೆಗೆ, ಮೂಗಿಗೆ, ಕೆಳ ತುಟಿಗೆ, ಬಲ ಮೊಳಕಾಲಿಗೆ ರಕ್ತಗಾಯ ವಾಗಿರುತ್ತದೆ ಅಂತ ತಿಳಿಸಿರುತ್ತಾರೆ. ಕಾರಣ ಮೊಟಾರ ಸೈಕಲ ನಂ. ಕೆಎ34ಕ್ಯೂವ್0735 ನೇದ್ದರ ಸವಾರ ಪ್ರಶಾಂತ ಈತನ ವಿರುದ್ದ ಕಾನೂನು ಕ್ರಮ ಜರುಗಿಸಲು ವಿನಂತಿ ಅಂತ ಕೊಟ್ಟ ಹೇಳಿಕೆ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.